

–ಜೈನ್‌ವಿದ್ಯಾನಿಕೇತನ ಪಿಯು ಕಾಲೇಜಿನ, ಪ್ರಥಮ ಪಿಯುಸಿ ಎ.ಬಿ.ಎಂ.ಎಸ್. ವಿಭಾಗದ ವಿದ್ಯಾರ್ಥಿನಿ **'ಅಬ್ನಾಜ್'** ಇವರು ದಿನಾಂಕ: 05–01–2019 ಶನಿವಾರದಂದು, ನ್ಯಾಷನಲ್ ಕಾಲೇಜು, ಬಸವನಗುಡಿ ಮತ್ತು ಕರ್ನಾಟಕ ಚರ್ಚಾ ವೇದಿಕೆಯ ಸಂಯುಕ್ತ ಆಶ್ರಯದಲ್ಲಿ ಕುಮಾರಿ ಎಚ್.ಎಂ. ವನಿತಾ ಸ್ಮಾರಕ– ರಾಜ್ಯ ಮಟ್ಟದ 17ನೇ ಅಂತರ ಕಾಲೇಜು ಕನ್ನಡ ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಿ ದ್ವಿತೀಯ ಬಹುಮಾನವನ್ನು ಪಡೆದಿರುತ್ತಾರೆ. ಇವರು **"ಸಮೂಹ ಮಾಧ್ಯಮಗಳು ವಿದ್ಯಾರ್ಥಿಗಳ ಭವಿಷ್ಯವನ್ನೇ ಹಾಳು ಮಾಡುತ್ತಿವೆ"**–ಎಂಬ ವಿಷಯದ ಪರವಾಗಿ ತಮ್ಮ ವಾದವನ್ನು ಅತ್ಯುತ್ತಮವಾಗಿ ಮಂಡಿಸುವುದರ ಮೂಲಕ **"ದ್ವಿತೀಯ ಬಹುಮಾನ"**ವನ್ನು ಪಡೆದುಕೊಂಡಿದ್ದಾರೆ. ರಾಜ್ಯಾದ್ಯಂತ 54 ಕಾಲೇಜುಗಳಿಂದ 108 ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಈ ವಿದ್ಯಾರ್ಥಿನಿಯು, ದಿನಾಂಕ 22–12–2018 ರಂದು ಮಹಾತ್ಮ ಪದವಿಪೂರ್ವ ಕಾಲೇಜು, ಹಾರೋಹಳ್ಳಿಯಲ್ಲಿ ನಡೆದ ರಾಮನಗರ **ಜಿಲ್ಲಾಮಟ್ಟದ** ಕನ್ನಡ ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಿ, **"ಭಾರತ–ಇಂದು ಎಂದೆಂದಿಗಿಂತಲೂ ಸುಸ್ಥಿತಿಯಲ್ಲಿದೆ"**–ಎಂಬ ವಿಷಯದ ವಿರೋಧವಾಗಿ ತಮ್ಮ ವಾದವನ್ನು ಮಂಡಿಸುವುದರ ಮೂಲಕ **ಪ್ರಥಮ ಬಹುಮಾನ**ದ ಜೊತೆಗೆ **ಪಾರಿತೋಷಕ**ವನ್ನು ಪಡೆದುಕೊಂಡು ಬಂದಿದ್ದಾರೆ.